2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು
<u>ಸತ್ರ ಮೊಕದ್ದಮೆ ನಂಃ**129/2013**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - ಪೂರ್ಣೇಶ | | ಪಿಡಬ್ಲ್ಯೂ - 2 |
| ತಂದೆಯ ಹೆಸರು | - ಹೆಚ್.ಎಸ್. ಪದ್ಮೇಗೌಡ | | ಸಿಡಬ್ಲ್ಯೂ - 2 |
| ವಯಸ್ಸು | - 39 ವರ್ಷ | | |
| ಉದ್ಯೋಗ | - ವ್ಯವಸಾಯ | | |
| ವಾಸ ಸ್ಥಳ | - ಹಳೆಕೆರೆ ಗ್ರಾಮ, ಮೂಡಿಗೆರೆ ತಾಲ್ಲೂಕು | | |

ದಿನಾಂಕಃ 17-01-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -</u>

1. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇದೆ. ಮೃತ 2 ನೇ ಆರೋಪಿಯ ಪರಿಚಯ ಕೂಡ ಇರುತ್ತದೆ. ಈ ದಿನ 1 ನೇ ಆರೋಪಿ ಗೈರು ಹಾಜರಾಗಿದ್ದು (1 ನೇ ಆರೋಪಿತನ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಅದರಲ್ಲಿ ಆತನ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು ತಿಳಿಸಿರುತ್ತಾರೆ.) ಆತನ ಪರಿಚಯ ಇರುತ್ತದೆ. ನನಗೆ ಫ್ರಾಸಾ.1 ನನಗೆ ಅಣ್ಣನಾಗಬೇಕು.

2. ದಿಃ 23.02.2013 ರಂದು ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಹಳೆಕೆರೆ ಗ್ರಾಮಕ್ಕೆ ಕಂದಾಯ ಅಧಿಕಾರಿಗಳು ಸರ್ವೆ ನಂಬರ್ 47 ರಲ್ಲಿ ಕಾಫಿ ಕಟಾವಿಗೆ ಬಂದಿದ್ದರು. ಆ ಜಾಗವು ಸ್ಮಶಾನದ ಜಾಗಕ್ಕೆ ಮೀಸಲಾಗಿತ್ತು. ಕಂದಾಯ ಅಧಿಕಾರಿಯಾದ ಗ್ರಾಮ ಲೆಕ್ಕಾಧಿಕಾರಿ ಕಲ್ಲೇಶ್ ಎಂಬುವವರು ಬಂದಿದ್ದರು. ಆ ಸಂದರ್ಭದಲ್ಲಿ ನಾನು ಮತ್ತು ನನ್ನ ಜೊತೆ ಸತೀಶ, ರಾಕೇಶ, ರಜನಿ, ವೆಂಕಟೇಶ, ರಘು ಇವರು ಸಹ ಬಂದಿದ್ದರು ಹಾಗೆಯೇ ಪೊಲೀಸರು ಸದರಿ ಸ್ಥಳದಲ್ಲಿ ಇದ್ದರು. ಆ ಸಮಯದಲ್ಲಿ 1 ನೇ ಆರೋಪಿ ಪ್ರಸನ್ನ ಈತನು ತನ್ನ ವಾಹನ ಸಂಖ್ಯೆ ಕೆ.ಎ.18/ಎಂ.ಕೆ.100 ರಲ್ಲಿ ಸದರಿ ಜಾಗಕ್ಕೆ ಏಕಾಏಕಿ ಬಂದು ನಮ್ಮ ಅಣ್ಣನಿಗೆ ಅವ್ಯಾಚ ಶಬ್ಧದಿಂದ

ಬೈದು, ಅಲ್ಲೆ ಇದ್ದ 2 ನೇ ಆರೋಪಿ ಮತ್ತು 3 ನೇ ಆರೋಪಿಗೆ ಅವನನ್ನು ಕತ್ತಿಯಿಂದ ಕಡಿಯಿರಿ ಎಂದು ಹೇಳಿದರು. ಅದರಂತೆ 4 ನೇ ಆರೋಪಿ ತಮ್ಮ ಮನೆಗೆ ಹೋಗಿ 2 ಕತ್ತಿಗಳನ್ನು ತೆಗೆದುಕೊಂಡು ಬಂದು 2 ನೇ ಆರೋಪಿ ಮತ್ತು 3 ನೇ ಆರೋಪಿಗಳಿಗೆ ಕೊಟ್ಟು ನನ್ನ ಅಣ್ಣನನ್ನು ಕಡಿಯಿರಿ ಎಂದು ಹೇಳಿದರು.

3. ಆ ಸಂದರ್ಭದಲ್ಲಿ 1 ನೇ ಆರೋಪಿ ಪ್ರಸನ್ನನು 2 ನೇ ಆರೋಪಿಯ ಹತ್ತಿರವಿದ್ದ ಕತ್ತಿಯನ್ನು ಕಸಿದುಕೊಂಡು ನನ್ನ ಅಣ್ಣನ ಮೇಲೆ ಕತ್ತಿಯಿಂದ ಕುತ್ತಿಗೆಗೆ ಕಡಿಯಲು ಬಂದಿದ್ದು ಆ ಸಮಯದಲ್ಲಿ ನನ್ನ ಅಣ್ಣನು ತನ್ನ ಎಡಗೈಯನ್ನು ಅಡ್ಡ ಮಾಡಿದಾಗ ಅವನ ಎಡಗೈನ ಹೆಬ್ಬೆರಳು ಮತ್ತು ಮಧ್ಯೆ ಬೆರಳಿಗೆ ರಕ್ತಗಾಯವಾಯಿತು. ನಂತರ ಆರೋಪಿಗಳು ನನ್ನ ಅಣ್ಣನ ಮೇಲೆ ದೊಣ್ಣೆಯಿಂದ ಮತ್ತು ಕಲ್ನಿಂದ ಹಲ್ಲೆ ಮಾಡಿರುತ್ತಾರೆ. ಆ ಸಂದರ್ಭದಲ್ಲಿ ನಾನು ನನ್ನ ಅಣ್ಣನನ್ನು ರಕ್ಷಣೆ ಮಾಡಲು ಹೋದಾಗ 2 ನೇ ಆರೋಪಿಯು ನನ್ನ ಕೈಗೆ ದೊಣ್ಣೆಯಿಂದ ಹೊಡೆದನು ಮತ್ತು 3 ನೇ ಆರೋಪಿಯು ಕಲ್ಲಿನಿಂದ ನನ್ನ ಎಡಗಾಲು ಪಾದಕ್ಕೆ ಹೊಡೆದಿದ್ದು ಗಾಯವಾಗಿರುತ್ತದೆ. ನನ್ನ ಅಣ್ಣನಾದ ಪ್ರಾಸಾ.1 ಇವರ ಬಟ್ಟೆಗಳು ಹರಿದು ಹೋಗಿತ್ತು. 1 ನೇ ಆರೋಪಿ ಪ್ರಸನ್ನನು ನನ್ನ ಅಣ್ಣನನ್ನು ಮತ್ತು ನಮ್ಮನ್ನು ಕೊಲೆ ಮಾಡಲು ಉದ್ದೇಶದಿಂದ ತನ್ನ ವಾಹನವನ್ನು 3-4 ಸಲ ಹಿಂದೆ ಮುಂದೆ ಮಾಡಿ ನಮ್ಮ ಮೇಲೆ ಹತ್ತಿಸಲು ಪ್ರಯತ್ನ ಮಾಡಿದನು. ನಂತರ ನನ್ನನ್ನು ಮತ್ತು ನನ್ನ ಅಣ್ಣನನ್ನು ನಮ್ಮ ಗ್ರಾಮದವರಾದ ಸತೀಶ, ರಾಕೇಶ, ರಜನಿಕಾಂತ, ವೆಂಕಟೇಶ್ ಇವರೆಲ್ಲರು ಸೇರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು.

4. ನಂತರ ನಾವು ಆಸ್ಪತ್ರೆಯಲ್ಲಿ ಇದ್ದಾಗ ಪೊಲೀಸರು ಬಂದು ನಮ್ಮ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನಂತರ 2 ದಿನಗಳ ನಂತರ ಪೊಲೀಸರು ಹಲ್ಲೆ ನಡೆದ ಸ್ಥಳಕ್ಕೆ ಹೋಗಿ ಮಹಜರ್ ಮಾಡಿರುತ್ತಾರೆ. ನನ್ನ ಮತ್ತು ನನ್ನ ಅಣ್ಣನ ಮೇಲೆ ಆರೋಪಿಗಳು ಕತ್ತಿಗಳಿಂದ ದೊಣ್ಣೆ ಮತ್ತು ಕಲ್ಲಿನಿಂದ ಹೊಡೆದಿದ್ದು, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗ ತೋರಿಸಿದ ಕತ್ತಿಗಳನ್ನು ನೋಡಿದ್ದು, ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿದೆ. ಸಾಕ್ಷಿಯು ದೊಣ್ಣೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ.3 ಎಂದು, ಒಂದು ಹಿಡಿ ಕಲ್ಲನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.4 ಎಂದು ಗುರುತಿಸಲಾಗಿದೆ.

5. ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳು ಮತ್ತು ಗೈರು ಹಾಜರಾದ 3 ನೇ ಆರೋಪಿಗಳೇ ನನ್ನ ಮೇಲೆ ಮತ್ತು ನನ್ನ ಅಣ್ಣನ ಮೇಲೆ ಆ ದಿನ ಹಲ್ಲೆ ಮಾಡಿದವರಾಗಿರುತ್ತಾರೆ.

<u>ಪಾಟೀ ಸವಾಲು ಶ್ರೀ ಎಸ್.ಹೆಚ್.ಎಂ.ಕೆ. ವಕೀಲರಿಂದ – 1, 3 ಮತ್ತು 4 ನೇ ಆರೋಪಿತರ ಪರವಾಗಿ</u>

6. ಆರೋಪಿತರ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮಧ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಓ.

(ಮಂಜುನಾಥ ಸಂಗ್ರೇಶಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಮಾ

ದಿನಾಂಕಃ 17-01-2019 ರಂದು ಮಧ್ಯಾಹ್ನ 3 ಗಂಟೆಗೆ ಪುನಃ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಎಸ್.ಹೆಚ್.ಎಂ.ಕೆ. ವಕೀಲರಿಂದ – 1, 3 ಮತ್ತು 4 ನೇ ಆರೋಪಿತರ ಪರವಾಗಿ

7. ಘಟನೆ ನಡೆದ ದಿನ ನಾನು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ನನಗೆ ಮತ್ತು ಮೃತ 2 ನೇ ಆರೋಪಿಗೆ ಸರ್ವೆ ನಂಬರ್ 47 ರಲ್ಲಿ ಜಮೀನು ಮಂಜೂರಾಗಿದೆ ಎಂದರೆ ಸರಿ. ಸದರಿ ಸರ್ವೆ ನಂಬರ್ 47 ರಲ್ಲಿ ಸ್ಮಶಾನಕ್ಕೆ ಎಂದು 30 ಗುಂಟೆ ಜಾಗವನ್ನು ಮೀಸಲಿಟ್ಟಿರುತ್ತಾರೆ. ಮೃತ 2 ನೇ ಆರೋಪಿಗೆ ಮಂಜೂರಾಗಿದ್ದ ಜಮೀನಿನಲ್ಲಿ ಅವರು ಕಾಫಿ ಬೆಳೆಗಳನ್ನು ಬೆಳೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ಪ್ರಸನ್ನ ಮತ್ತು ನನಗೂ ಮೊದಲಿನಿಂದಲೂ ಮಾತುಕತೆ ಇತ್ತು, ಆದರೆ ಈ ಘಟನೆಯಾದ ನಂತರ ಇರುವುದಿಲ್ಲ. ಸರ್ವೆ ನಂಬರ್ 47 ರ ಪಕ್ಕದಲ್ಲಿ ಒಂದು ಭಾಗಕ್ಕೆ 1 ನೇ ಆರೋಪಿಯ ಜಮೀನು ಇದ್ದು, ಅದರ ಸರ್ವೇ ನಂಬರ್ ನನಗೆ ಗೊತ್ತಿರುವುದಿಲ್ಲ. ಘಟನೆ ನಡೆದ ದಿನ ಗ್ರಾಮ ಲೆಕ್ಕಾಧಿಕಾರಿ ಮತ್ತು

ಇಬ್ಬರು ಪೊಲೀಸರು ಇದ್ದರು. ಈ ಘಟನೆಯಾಗುವ ಪೂರ್ಣ ಅವಧಿ ಸದರಿ ಅಧಿಕಾರಿಗಳು ಸ್ಥಳದಲ್ಲಿ ಇದ್ದರು. ಸದರಿ ಘಟನೆ ಬಗ್ಗೆ ಎಲ್ಲಾ ವಿಷಯಗಳು 3 ಜನ ಅಧಿಕಾರಿಗಳಿಗೆ ಗೊತ್ತಿದೆ ಎಂದರೆ ಸರಿ. 1 ಮತ್ತು 2 ನೇ ಆರೋಪಿಗಳ ಮೇಲೆ ನಾನು ನನ್ನ ಸಹೋದರರು ಹಲ್ಲೆ ಮಾಡಿದ್ದು ಅದರ ಕುರಿತಂತೆ ನನ್ನನ್ನು ಸೇರಿ 11 ಜನರ ಮೇಲೆ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಆ ದಿನ ನಾವು 1 ನೇ ಆರೋಪಿಯ ವಾಹನದ ಹಿಂಭಾಗದ ಗ್ಲಾಸ್ ನ ಮೇಲೆ ಸೈಜು ಕಲ್ಲನ್ನು ಎತ್ತಿ ಹಾಕಿದ್ದು ಅದರ ಕುರಿತಂತೆ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ.

8. 1 ನೇ ಆರೋಪಿ ನನ್ನ ಅಣ್ಣನಾದ ಪ್ರಾಸಾ.3 - ವೆಂಕಟೇಶ್ ರವರ ಮೇಲೆ ಪ್ರಕರಣದ ಹಾಕಿದ್ದರ ಕುರಿತು ನನಗೆ ಮಾಹಿತಿ ಇಲ್ಲ. ನನ್ನ ಹಾಗೂ ಇತರ ಗ್ರಾಮಸ್ಥರ ಮೇಲೆ 1 ನೇ ಆರೋಪಿಯು ಸಾಕಷ್ಟು ದೂರನ್ನು ಸಲ್ಲಿಸಿರುತ್ತಾರೆ. ಘಟನೆ ನಡೆದ ಸ್ಥಳಕ್ಕೆ ಆ ದಿನ 1 ನೇ ಆರೋಪಿ ಬಂದಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯಗೆ ಟಾಟಾ ಸಫಾರಿ ವಾಹನ ಇರುತ್ತದೆ. ಸದರಿ ಆರೋಪಿಗಳು ನಮಗೆ ಅವಚ್ಯಾ ಶಬ್ಧಗಳಿಂದ ಬೈದಿದ್ದು ಮತ್ತು 1 ನೇ ಆರೋಪಿಯು ನಮ್ಮನ್ನು ಕೊಲೆ ಮಾಡಲು 2 ನೇ ಆರೋಪಿಗೆ ಕತ್ತಿಗಳನ್ನು ತೆಗೆದುಕೊಂಡು ಬಾ ಎಂದು ಹೇಳಿದ್ದು ಸುಳ್ಳು ಎಂದರೆ ಸರಿಯಲ್ಲ. ಸ್ಥಳದಲ್ಲಿ ಇದ್ದ ಕಂದಾಯ ಅಧಿಕಾರಿಗೆ ತಹಶೀಲ್ದಾರರಿಂದ ಫೋನ್ ಕರೆ ಬಂದಿದ್ದು ಅವರು ಹೋಗಲಿಕ್ಕೆ ಪ್ರಯತ್ನ ಪಡುತ್ತಿದ್ದರು ಎಂದರೆ ಸರಿಯಲ್ಲ. ಘಟನೆ ನಡೆದ ದಿನ 1 ನೇ ಆರೋಪಿಯು ತನ್ನ ವಾಹನದಲ್ಲಿ ಮನೆಗೆ ಹೋಗುವಾಗ ನಾವು ಅಣ್ಣತಮ್ಮಂದಿರು ಮತ್ತು ಇತರರು ಸೇರಿ ಅವರ ಕಾರನ್ನು ಅಡ್ಡಗಟ್ಟಿ ಹಲ್ಲೆ

ಮಾಡಿದೆವು ಎಂದರೆ ಸರಿಯಲ್ಲ. ಮು.ಮಾ.1 ರಿಂದ 4 ಇವುಗಳನ್ನು ಘಟನೆ ನಡೆದ ದಿನ ಮತ್ತು ಸ್ಥಳದಲ್ಲಿ ನೋಡಿದ್ದು ಬಿಟ್ಟರೆ ಈ ದಿನವೇ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ. ಮು.ಮಾ.1 ಮತ್ತು 2 ರ ಮೇಲೆ ರಕ್ತದ ಕಲೆ ಇತ್ತು ಅದರ ಹೊರತಾಗಿ ಬೇರೆ ಗುರುತು ಇರಲಿಲ್ಲ. ಈ ದಿನ ನಾನು ನೋಡಿದ ಮು.ಮಾ.1 ಮತ್ತು 2 ರಲ್ಲಿ ರಕ್ತದ ಕಲೆ ಇರುವ ಬಗ್ಗೆ ಗೊತ್ತಿಲ್ಲ. ಘಟನೆ ನಡೆದ ದಿನ ನನ್ನ ಅಣ್ಣ ಫ್ರಾಸಾ.1 ಬಿಳಿ ಬಣ್ಣದ ಶರ್ಟ್ ನ್ನು ಹಾಕಿಕೊಂಡಿದ್ದಿರಬಹುದು.

9. ಘಟನೆ ನಡೆದ ದಿನ 1 ನೇ ಆರೋಪಿಯು ಕತ್ತಿಯಿಂದ ನನ್ನ ಅಣ್ಣ ಫ್ರಾಸಾ.1 ರವರ ಕುತ್ತಿಗೆಗೆ ಹಲ್ಲೆ ಮಾಡಲು ಬಂದಾಗ ನನ್ನ ಅಣ್ಣ ತನ್ನ ಕೈಯನ್ನು ಅಡ್ಡ ಹಿಡಿದಾಗ ಸದರಿ ಹಲ್ಲೆಯಿಂದ ಆತನ ಕೈ ಬೆರಳುಗಳಿಗೆ ರಕ್ತಗಾಯವಾಗಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿ ನನಗೆ ಒಂದು ಹಿಡಿ ಕಲ್ಲಿನಿಂದ ನನ್ನ ಹಿಮ್ಮಡಿಗೆ ಹೊಡೆದನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 1 ನೇ ಆರೋಪಿಯು ತನ್ನ ಕಾರನ್ನು 2-3 ಸಲ ಹಿಂದೆ ಮುಂದೆ ಚಲನೆ ಮಾಡಿದಾಗ ಹಿಂಭಾಗದ ಗ್ಲಾಸು ಗೆರೆಗೆ ತಾಗಿ ವಡೆದು ಹೋಗಿದ್ದು ಸುಳ್ಳು ನಾವು ಅದನ್ನು ವಡೆದು ಹಾಕಿದ್ದೇವೆ ಎಂದರೆ ಸರಿಯಲ್ಲ. ಘಟನೆ ನಡೆದ ದಿನ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ಅದೇ ದಿನ ವಾಪಸ್ಸು ಬಂದಿರುತ್ತೇನೆ. ನಾನು ಹೇಳಿದಂತೆ ಆ ದಿನ ಯಾವುದೇ ಘಟನೆ ನಡೆದಿಲ್ಲ. ನನ್ನ ಅಣ್ಣ ಫ್ರಾಸಾ.1 ರಘು ಇವರು ಹೇಳಿಕೊಟ್ಟಂತೆ ನ್ಯಾಯಾಲಯದ ಮುಂದೆ ಆರೋಪಿಗಳ ಮೇಲೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>
(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾ